ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ", ಬೆಳಗಾವಿ-೫೯೦೦೧೮, ಕರ್ನಾಟಕ, ಭಾರತ
Visvesvaraya Technological University
Phone: (0831) 2498100, Fax: (0831) 2405467, Website: vtu.ac.in

ಪ್ರೊ.ಎ.ಎಸ್.ದೇಶಪಾಂಡೆ ಬಿ.ಇ(ಮೆಕ್), ಎಮ್.ಟೆಕ್., ಪಿಹೆಚ್.ಡಿ.
ಕುಲಸಚಿವರು

ಉಲ್ಲೇಖ ಸಂ. : ವಿತಾವಿ/ಪಿಎಸ್/2021-22/ 993 ದಿನಾಂಕ: 28 JUN 2021

# ಸುತ್ತೋಲೆ

**ವಿಷಯ - ೨೦೨೧- ೨೨ನೇ ಶೈಕ್ಷಣಿಕ ಸಾಲಿನಿಂದ ಪ್ರಾದೇಶಿಕ ಭಾಷೆಗಳಲ್ಲಿ ಎಂಜಿನಿಯರಿಂಗ್ ಪದವಿಯನ್ನು ಆರಂಭಿಸುವ ಕುರಿತು.....**

ಉಲ್ಲೇಖ – ೧. ಎ ಐ ಸಿ ಟಿ ಇ ಅನುಮೋದನಾ ಪ್ರಕ್ರಿಯೆ ಕೈಪಿಡಿ -೨೦೨೧ ರ ಷರತ್ತು ಸಂಖ್ಯೆ :೨.೧೪.೧.೧ ಪುಟ ಸಂಖ್ಯೆ : ೫೪.
೨. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ - ೨೮/೦೬/೨೦೨೧.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ತಮಗೆ ತಿಳಿಸುವುದೇನೆಂದರೆ, ಒಬ್ಬ ವ್ಯಕ್ತಿಯ ಮಾತೃಭಾಷೆ ಅಥವಾ ಆ ವ್ಯಕ್ತಿ ವಿಕಸನಗೊಂಡ ಪ್ರದೇಶದ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣವನ್ನು ಒದಗಿಸಿದರೆ ಮಾತ್ರ ಆ ವ್ಯಕ್ತಿಯಲ್ಲಿ ಅಂತರ್ಗತವಾದ ನಾವಿನ್ಯತಾ ಚಿಂತನಶೀಲತೆ, ಕೌಶಲ್ಯ ಜ್ಞಾನ ಹಾಗೂ ಕ್ರಿಯಾತ್ಮಕ ಪ್ರತಿಭೆಯನ್ನು ಸಾಮಾಜಿಕ ವೇದಿಕೆಗೆ ತಂದು ರಾಷ್ಟ್ರದ ಪ್ರಗತಿಯಲ್ಲಿ ಪರಿಣಾಮಕಾರಿಯಾಗಿ ಬಳಿಸಿಕೊಳ್ಳಲು ಸಾಧ್ಯ. ಇದು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ -೨೦೨೦ರ ಒಟ್ಟಾರೆ ಅಭಿಪ್ರಾಯ ಹಾಗೂ ಉದ್ದೇಶವಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ -೨೦೨೦ ರ ಈ ಉದ್ದೇಶದಂತೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎ ಐ ಸಿ ಟಿ ಈ) ಪ್ರಾದೇಶಿಕ ಭಾಷೆಗಳಲ್ಲಿ ತಾಂತ್ರಿಕ ಶಿಕ್ಷಣವನ್ನು ಒದಗಿಸುವ ಯೋಜನೆಯನ್ನು ಪ್ರಾರಂಭ ಮಾಡುವ ನಿರ್ಧಾರವನ್ನು ತೆಗೆದುಕೊಂಡಿದ್ದು, ಕನ್ನಡ ಸೇರಿದಂತೆ ಎಂಟು ಪ್ರಾದೇಶಿಕ ಭಾಷೆಗಳಲ್ಲಿ ಎಂಜಿನಿಯರಿಂಗ್ ಪದವಿಯನ್ನು ನೀಡಲು ಕಾಲೇಜುಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎ ಐ ಸಿ ಟಿ ಈ) ಅನುಮತಿ ನೀಡಿದೆ. ಈ ನಿರ್ಧಾರದಿಂದ, ವಿಶೇಷವಾಗಿ ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಹಾಗು ತಾಂತ್ರಿಕ ಶಿಕ್ಷಣವನ್ನು ಪಡೆಯುವ ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ಸಹಾಯವಾಗಲಿದೆ. ಈ ನಿರ್ಧಾರದಿಂದ ಪ್ರಾದೇಶಿಕ ಭಾಷೆಯಲ್ಲಿ ತಾಂತ್ರಿಕ ಶಿಕ್ಷಣ, ಈ ವಿಷಯದಲ್ಲಿ ಭಾರತವು, ತಮ್ಮ ದೇಶೀಯ ಭಾಷೆಗಳಲ್ಲಿ ಸಂಪೂರ್ಣ ಶಿಕ್ಷಣವನ್ನು ನೀಡುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ ಜರ್ಮನಿ, ಫ್ರಾನ್ಸ್, ರಷ್ಯಾ, ಜಪಾನ್ ಮತ್ತು ಚೀನಾದಂತಹ ಅನೇಕ ರಾಷ್ಟ್ರಗಳ ಪಟ್ಟಿಯನ್ನು ಸೇರಿದಂತಾಗಿದೆ.

ಈ ನಿಟ್ಟಿನಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎ ಐ ಸಿ ಟಿ ಈ) ತೀರ್ಮಾನದಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿ ತಾ ವಿ)ವು ಮುಂದಿನ ಶೈಕ್ಷಣಿಕ ವರ್ಷದಿಂದ ತನ್ನ ಅಧೀನದಲ್ಲಿ ಬರುವ ಅರ್ಹ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ಕನ್ನಡದಲ್ಲಿ ಇಂಜಿನಿಯರಿಂಗ್ ಪದವಿ ಶಿಕ್ಷಣವನ್ನು ಆರಂಭಿಸಲು ನಿರ್ಧರಿಸಿದೆ. ಈ ಪದವಿಯನ್ನು ಪ್ರಾರಂಭಿಸಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎ ಐ ಸಿ ಟಿ ಈ) ಕೆಲವು ಮಾರ್ಗ ಸೂಚನೆ ಹಾಗೂ ಮಾನದಂಡಗಳನ್ನು ನೀಡಿದ್ದು ಅವು ಕೆಳಗಿನಂತಿವೆ -

**೧. ಯಾವ ಸಂಸ್ಥೆ ಯಾವ ವಿಭಾಗದಲ್ಲಿ ಕನ್ನಡದಲ್ಲಿ ಇಂಜಿನಿಯರಿಂಗ್ ಪದವಿ ಶಿಕ್ಷಣವನ್ನು ಆರಂಭಿಸಲು ನಿರ್ದರಿಸುವುದೋ ಆ ವಿಭಾಗ ಕಡ್ಡಾಯವಾಗಿ ಏನ್ ಬಿ ಎ ಮಾನ್ಯತೆಯನ್ನು ಹೊಂದಿರಬೇಕು.**

**೨. ಪ್ರತಿ ಅರ್ಹ ಸಂಸ್ಥೆಗೆ ಒಂದು ವಿಭಾಗಕ್ಕೆ ಸೀಮಿತಿಗೊಳಿಸಿ ೩೦ ಅಥವಾ ೬೦ ವಿದ್ಯಾರ್ಥಿಗಳ ಒಂದು ವಿಭಾಗವನ್ನು ಆರಂಭಿಸಲು ಅನುಮತಿ ನೀಡಲಾಗುವುದು.**

**೩. ಈ ತರಗತಿಯಲ್ಲಿ ಬೋಧನೆ ಹಾಗೂ ಪರೀಕ್ಷೆ ಎಲ್ಲವೂ ಕನ್ನಡದಲ್ಲೇ ಇರುತ್ತದೆ.**

ಮುಂದುವರೆದು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎ ಐ ಸಿ ಟಿ ಈ) ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಪಠ್ಯಕ್ರಮಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಅನುವಾದಿಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, **ಕನ್ನಡಕ್ಕೆ ಸಂಬಂಧಿಸಿದಂತೆ ಅನುವಾದಿಸುವ ಜವಾಬ್ದಾರಿಯನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎ ಐ ಸಿ ಟಿ ಈ) ಯು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(ವಿ ತಾ ವಿ) ಕ್ಕೆ ನೀಡಿದೆ ಮತ್ತು ಆ ಕೆಲಸವೂ ಪ್ರಗತಿಯಲ್ಲಿದೆ.**

ಈ ನಿಟ್ಟಿನಲ್ಲಿ, ಇದರ ಅನುಷ್ಠಾನಕ್ಕೆ ಅಗತ್ಯವಿರುವ ಕಾರ್ಯಯೋಜನೆ ಬಗ್ಗೆ ಅಧೀನ ಇಂಜಿನಿಯರಿಂಗ್ ಸಂಸ್ಥೆಗಳ ಅಭಿಪ್ರಾಯವನ್ನು ಹಾಗೂ ಸಲಹೆಗಳನ್ನು ಪಡೆಯಲು ನಿರ್ಧರಿಸಿದ್ದು, ತಾವೂ ಮೇಲೆ ತಿಳಿಸಿದ ವಿಷಯವನ್ನು ಪರಿಶೀಲಿಸಿ ಅಭಿಪ್ರಾಯ ವರದಿಯನ್ನು **೧೫ ದಿನಗಳೊಳಗಾಗಿ** ನೀಡಲು ಈ ಮೂಲಕ ಸೂಚಿಸಿದೆ. ತಮ್ಮ ಅಭಿಪ್ರಾಯವನ್ನು **sbhvtuso@gmail.com** ಗೆ ಕಳುಹಿಸಿಕೊಡಬಹುದು.

ಧನ್ಯವಾದಗಳು

ಕುಲಸಚಿವರು

ಇವರಿಗೆ,

**ಪ್ರಾಚಾರ್ಯರರು/ನಿರ್ದೇಶಕರು, ವಿ ತಾ ವಿ ಅಧೀನದಲ್ಲಿರುವ ಎಲ್ಲ ಇಂಜಿನಿಯರಿಂಗ್ ಮಹಾವಿದ್ಯಾಲಯಗಳು.**

ಪ್ರತಿ–

**೧.ಮಾನ್ಯ ಕುಲಪತಿಗಳು ವಿ ತಾ ವಿ ಬೆಳಗಾವಿ ಇವರಿಗೆ, ಅವರ ಆಪ್ತ ಕಾರ್ಯದರ್ಶಿಗಳ ಮುಖಾಂತರ.**

**೨.ಕುಲಸಚಿವರು (ಮೌಲ್ಯಮಾಪನ), ವಿ ತಾ ವಿ ಬೆಳಗಾವಿ**

**೩.ವಿಶೇಷಾಧಿಕಾರಿಗಳು, ಶೈಕ್ಷಣಿಕ ವಿಭಾಗ, ಬೆಳಗಾವಿ**